ಪ್ರಧಾನ ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿಸಿ ನಂ.**1158/2025**

| | | |
|---|---|---|
| ಪಿರ್ಯಾದಿ | : | ಶ್ರೀಮತಿ ಸಂಗೀತ.ಕೆ.ಭದ್ರಕಲಾ ಗಂಡ ಕಾಶೀನಾಥ, ವಯಸ್ಸುಃ 46 ವರ್ಷ, ಉಃ ಒಕ್ಕಲುತನ ಮತ್ತು ವ್ಯಾಪಾರ, ಸಾಃ ಗಾಜಿಪುರ್, ಕಲಬುರಗಿ, ತಾಃ ಮತ್ತು ಜಿಃ ಕಲಬುರಗಿ. |
| ಆರೋಪಿ | : | ಶ್ರೀ ಪೃತ್ವಿರಾಜ್ ಮನಸ್ಗಲ್ ತಂದೆ ವೀರನಗೌಡ ಮನಸ್ಗಲ್, ವಃ 65 ವರ್ಷ, ಉಃ ರೀಯಲ್ ಎಸ್ಟೇಟ್ ಬುಸಿನೇಸ್ ಮತ್ತು ಫೈನಾನ್ಸ್, ಸಾಃ ಮನೆ ನಂ.2-3-54, ಮೈಲಾಪುರ ಬೇಸ್, ಬಂಡಿಗೇರ ಏರಿಯಾ, ಯಾದಗಿರಿ, ತಾಃ ಮತ್ತು ಜಿಃ ಯಾದಗಿರಿ. |

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **351** ರ ಅಡಿಯಲ್ಲಿ ಆರೋಪಿತನ ಹೇಳಿಕ

ಪ್ರಶ್ನೆಃ1ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆ2 : ಪ್ರಾಸಾ-1 ಶ್ರೀಮತಿ ಸಂಗೀತ.ಕೆ.ಭದ್ರಕಲಾ ಗಂಡ ಕಾಶೀನಾಥ ಇವರು ಪಿರ್ಯಾದಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ಆರೋಪಿಯಾದ ನೀವು ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಸೇರಿದ ಯಾದಗಿರಿ ಕೆ ಗ್ರಾಮದ ಸರ್ವೆ ನಂ **52, 183, 187** ಮತ್ತು **188** ರ ಜಮೀನಿನಲ್ಲಿ ಅನಮೂಲ್ ಕಾಲೋನಿ ಎಂಬ ಹೆಸರಿನಡಿಯಲ್ಲಿ ಯೋಜನೆ ರೂಪಿಸಿ ತಲಾ **30 X 40** ಅಡಿಯ ನಿವೇಶನಗಳನ್ನು ನಿರ್ಮಿಸಿ ಆ ಪೈಕಿ **1** ನಿವೇಶನವನ್ನು ದೂರುದಾರರಿಗೆ ರೂ**.5,00,000/-** ಮೊತ್ತಕ್ಕೆ ಮಾರಾಟ ಮಾಡುವುದಾಗಿ ತಿಳಿಸಿ ಅವರಿಂದ ದಿನಾಂಕ **01.08.2018** ರಿಂದ **01.09.2022** ರ ಅವಧಿಯಲ್ಲಿ ತಿಂಗಳಿಗೆ ರೂ**.10,000/-** ದಂತೆ **50** ಕಂತುಗಳಲ್ಲಿ ರೂ**.5,00,000/-** ಹಣ ಪಡೆದುಕೊಂಡಿರುತ್ತೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆಃ 3 ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ನೀವು ದೂರುದಾರರಿಗೆ ನಿವೇಶನ ಮಾರಾಟ ಮಾಡದೆ ಅವರಿಂದ ಪಡೆದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಆಪಾದಿತನಾದ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎ.ಡಿ.ಬಿ ಶಾಖೆ, ಸ್ಟೇಷನ್ ರೋಡ್, ಯಾದಗಿರಿ ಗೆ ಸೇರಿದ **971572** ಸಂಖ್ಯೆಯ ಚೆಕ್ ನಲ್ಲಿ ರೂ. **5,00,000/-** ಹಾಗೂ ದಿನಾಂಕ **16.05.2025** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 4ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್**,** ಯಾದಗಿರಿ ಶಾಖೆಯ ಮೂಲಕ ದಿನಾಂಕ **16.05.2025** ರಂದು ಹಾಜರು ಪಡಿಸಿದಾಗ**,** **"Funds Insufficient"** ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **06.06.2025** ರಂದು ವಾಪಸ್ಸು ನೀಡಿರುತ್ತಾರೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 5ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **13.06.2025** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು**,** ಸದರಿ ನೋಟಿಸ್ ನಿಮಗೆ ದಿನಾಂಕ **16.06.2025** ರಂದು ಜಾರಿಯಾಗಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **6**ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **7** ಃ ನಿಮ್ಮ ಪರ ಯವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

**(**ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 01.04.2026
ಸ್ಥಳಃ ಯಾದಗಿರಿ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ ಸಿ
ನ್ಯಾಯಾಧೀಶರು,ಯಾದಗಿರಿ.